Prepp
Your Personal Exams Guide

SET **M**

| Question Paper Booklet Sl. No. | |
|---|---|

# K-TET - AUGUST 2012

**Roll No.** | | | | | | |

| **Category - II** | **Part - 2** |
|---|---|

| Question Code | Area/Subjects | No. of Questions | Sl.No. of Questions | Sl. No. of Pages |
|---|---|---|---|---|
| **604** | Kannada | **30** | **91** to **120** | **3** to **6** |

Space for Rough Work - Page No. : **2 and 7.**

## INSTRUCTIONS :

**Candidates are advised to read the following instructions very carefully.**

Non-compliance of any of these may result in cancellation of the OMR Answer Sheet.

1. Don't open the Question Booklet seal before time. **Before attempting the papers, the candidates should make sure that no page or question is missing from the Question Paper.** In case there is any discrepancy, it should be immediately reported to the invigilator incharge for obtaining a complete Question Paper.

2. Candidates should occupy only the allocated seat at the venue of the allotted centre as per seating plan.

3. **Use only Blue/Black Ball Point Pen for answering objective (multiple choice) questions on OMR Answer Sheet.**

4. No identification mark, other than where asked for, on the OMR Answer Sheet, is permitted. If done so, the OMR Answer Sheet is liable to be treated as cancelled. The decision of the Secretary, Pareeksha Bhavan in this regard shall be final.

5. If at any stage OMR Answer Sheet of a candidate shows or it is otherwise established that he/she has received or attempted to receive help from any source in any manner or has given help or attempted to give help to other candidate in any manner, the relevant OMR Answer Sheet and his/her candidature for K-TET - 2012 will be cancelled. The decision of the Secretary, Pareeksha Bhavan in this regard shall be final.

Prepp
Your Personal Exams Guide

## CATEGORY - II

### PART - 2

### Kannada - Question Numbers 91 to 120

**I. ಈ ಕೆಳಗಿನ ಗದ್ಯಭಾಗವನ್ನು ಓದಿ ಸೂಚನೆಯಂತೆ ಉತ್ತರಿಸಿರಿ.**

ಬಾಳನ್ನು ಒಡೆಯುದಂತೆ ಕಾಪಾಡಿ, ಪರಸ್ಪರ ಹೃದಯಗಳನ್ನು ಒಂದುಗೂಡಿಸಿ, ಬದುಕಿನಲ್ಲಿ ಉತ್ಸಾಹವನ್ನೂ ಲವಲವಿಕೆಯನ್ನೂ ಹುಟ್ಟಿಸಿ, ಜೀವನವನ್ನಾಳುವ ದಿವ್ಯ ಶಕ್ತಿಯೇ ಪ್ರೇಮ. ಇದರ ಆಳ ಅಗಲಗಳನ್ನು ಅಳೆಯುವ ಕಾರ್ಯ ಇನ್ನೂ ಮುಗಿದಿಲ್ಲ; ಅದು ಮುಗಿಯುವುದೂ ಇಲ್ಲ. ಅದರ ಜೀವನ ಶಕ್ತಿಯಿಂದಲೇ ಸೃಷ್ಟಿ ತನ್ನ ಹೊಸತನವನ್ನು ಮೆರೆಯುತ್ತಾ ಬಂದಿದೆ; ಬದುಕು ಸಹ್ಯವೆನಿಸಿದೆ. ಅದರ ರಹಸ್ಯವನ್ನರಿಯುವ ದಾರಿಯಲ್ಲಿ ಕಂಡುಂಡ ಸುಖ ಸಂತೋಷಗಳನ್ನು ನೋವು ಕಾವುಗಳನ್ನು ಕವಿಯ ಭಾವ ಪ್ರಕಾಶ ಬೆಳಗಿಸಿ ತೋರಿದಾಗ ಆ ಜೀವನ ಸೌಂದರ್ಯಕ್ಕೆ ನಾವು ಬೆರಗಾಗುತ್ತೇವೆ. ಜೀವನದ ಹೋರಾಟದಲ್ಲಿಯೇ ಹಗಲಿರುಳೂ ಮುಳುಗಿದ್ದರೂ ಅದರ ಯಾವುದೋ ಸುಖಸ್ಪರ್ಶದಿಂದ ದೂರದಲ್ಲಿದ್ದಂತೆ ಎನಿಸುವ ನಾವು ಪ್ರೇಮದ ಆ ಒಂದು ಅನುಭವದಿಂದ ಜೀವನದ ಹತ್ತಿರಕ್ಕೆ ಬರುತ್ತೇವೆ; ಅದನ್ನು ಪ್ರೀತಿಸುತ್ತೇವೆ; ಆತ್ಮೀಯರಾಗುತ್ತೇವೆ. ಆ ಪ್ರೀತಿಯನ್ನು ಕೊಟ್ಟುಕೊಂಡು ಕೊನೆದಾಡಿದಷ್ಟು ಬದುಕಿನ ನಿರ್ಮಲವಾದ ಆನಂದ ನಮ್ಮ ಹೃದಯವನ್ನು ಮುಂಜಾವದ ಹೊಂಬೆಳಕಿನಂತೆ ತೊಳಗಿ ಬೆಳಗುತ್ತದೆ. ಈ ಪ್ರೇಮವೇ ಪ್ರಣಯ, ಸ್ನೇಹ, ವಾತ್ಸಲ್ಯ, ಭಕ್ತಿ, ಪೂಜ್ಯತೆ, ಮೊದಲಾದ ಭಾವಗಳಾಗಿ ಪರಿಣಮಿಸಿ ಜೀವನದ ವೈವಿಧ್ಯವನ್ನು ಅಲೌಕಿಕವೆನ್ನುವಂತೆ ಮೆರೆಸುತ್ತದೆ; ಸಂಸಾರವನ್ನು ಸಾರವತ್ತಾಗಿ ಮಾಡುತ್ತದೆ.

**91.** ಮೇಲಿನ ಗದ್ಯಭಾಗವು ಯಾವ ಆಶಯವನ್ನು ಒಳಗೊಂಡಿದೆ ?

(A) ಅಲೌಕಿಕತೆಯೊಂದೇ ಜೀವನವನ್ನು ಸಹ್ಯವಾಗಿಸುತ್ತದೆ.

(B) ಆನಂದಾನುಭವವೊಂದೇ ಜೀವನ ಸೌಂದರ್ಯವನ್ನುಂಟು ಮಾಡುತ್ತದೆ.

(C) ಕವಿಕರ್ಮವು ಸುಖಜೀವನದ ಮಾಧ್ಯಮವಾಗುತ್ತದೆ.

(D) ಪ್ರೇಮವು ಜೀವನ ಪ್ರೀತಿಯನ್ನು ಹೆಚ್ಚಿಸುತ್ತದೆ

**92.** "ಹೃದಯವನ್ನು ಮುಂಜಾವದ ಹೊಂಬೆಳಕಿನಂತೆ ತೊಳಗಿ ಬೆಳಗುತ್ತದೆ" ಈ ವಾಕ್ಯ ಯಾವ ವಿಶೇಷಾರ್ಥವನ್ನು ನೀಡುತ್ತದೆ ?

(A) ಮನಸ್ಸನ್ನು ನಿರ್ಮಲಗೊಳಿಸುತ್ತದೆ

(B) ಮನಸ್ಸಿಗೆ ಆನಂದವನ್ನು ನೀಡುತ್ತದೆ

(C) ಮನಸ್ಸಿಗೆ ದು:ಖವನ್ನು ನೀಡುತ್ತದೆ

(D) ಮನಸ್ಸನ್ನು ನಿರ್ಮಲಗೊಳಿಸಿ ಆನಂದವನ್ನು ನೀಡುತ್ತದೆ

**93.** ಆಳ-ಅಗಲ, ಸುಖ-ಸಂತೋಷ, ನೋವು-ಕಾವು - ಈ ಪದಗಳು ಯಾವ ವ್ಯಾಕರಣಾಂಶವನ್ನು ಒಳಗೊಂಡಿದೆ ?

(A) ಅನುಕರಣ ಪದ

(B) ದ್ವಿರುಕ್ತಿ

(C) ಜೋಡುನುಡಿ

(D) ವಿರೋಧಾರ್ಥಕ ಪದ

**94.** ಗದ್ಯಭಾಗದಲ್ಲಿನ ಯಾವ ಪದವು 'ಮರ್ಮ' ಎಂಬ ಅರ್ಥವನ್ನು ನೀಡುತ್ತದೆ ?

(A) ರಹಸ್ಯ

(B) ಸಹ್ಯ

(C) ಸೌಂದರ್ಯ

(D) ಹೃದಯ

**95.** 'ಜೀವನವನ್ನಾಳುವ' - ಇದು ಯಾವ ಸಂಧಿಗೆ ಉದಾಹರಣೆ ?

(A) ಆಗಮ ಸಂಧಿ

(B) ಆದೇಶ ಸಂಧಿ

(C) ಸವರ್ಣದೀರ್ಘ ಸಂಧಿ

(D) ಲೋಪ ಸಂಧಿ

Prepp
Your Personal Exams Guide

**II. ಕೆಳಗಿನ ಕವನವನ್ನು ಓದಿ ಸೂಚನೆಯಂತೆ ಉತ್ತರಿಸಿರಿ.**

ಕನ್ನಡದ ವೇದಗಳು ಜಾನಪದ ಗೀತಗಳು
ಇದನು ಬರೆದವರೆಲ್ಲ ಎಲೆ ಮರೆಯ ಹೂವುಗಳು
ಕೀರ್ತಿ ಕಾಮಿಗಳಲ್ಲ ಆ ಕಬ್ಬಿಗರು; ಹೆಸರ
ಬಯಸದೆಯೆ ಹಾಡಿದರು ಅನುಭಾವಗಳ ಉಸಿರ
ನೊಂದನೆ ಹಿಡಿದು. ರಾಜಾಧಿರಾಜನಾಸ್ಥಾನ
ದಲಿ ಅವರು ಪಂಪ ರನ್ನರ ತೆರದಿ ಸನ್ಮಾನ
ದಾನಗಳ ಪಡೆದಿಲ್ಲ. ತಾಳೆಯೋಲೆಗಳಲ್ಲಿ
ಬರೆದಿಡಲು ಬಯಸಿಲ್ಲ. ಜನಮನದ ಎದೆಯಲ್ಲಿ
ವರುಷವೆನಿತಾದರೂ ಶೃತಿರೂಪದಲಿ ಹರಿದು
ಬಂದವು ಗಂಗೆಯಂತೆ. ಅವರ ಮನದಲಿ ಕೊರೆದು
ನಿಂದವು ಚಿತ್ರದಂತೆ. ಕನ್ನಡದ ಸಂಸ್ಕೃತಿಯು
ಆರ್ಯ ಸಂಸ್ಕೃತಿಯೆದುರು ತಲೆಬಾಗ ಬೇಕಿಲ್ಲ
ನಮ್ಮ ಸಿರಿಗನ್ನಡದ ಕಾವ್ಯರಸ ವಾರಿಧಿಯು
ನಿಜಕು ರತ್ನಾಕರಂ! ಕನ್ನಡಕೆ ಸೋಲಿಲ್ಲ.

**96.** ಮೇಲಿನ ಕವನದಲ್ಲಿ ಕವಿ ಯಾರನ್ನು ಪ್ರಶಂಸಿಸುತ್ತಿದ್ದಾರೆ?

(A) ಕನ್ನಡದ ಶಿಷ್ಟಕವಿಗಳನ್ನು
(B) ಜನಪದ ಕವಿಗಳನ್ನು
(C) ಪಂಪ, ರನ್ನರನ್ನು
(D) ಕನ್ನಡಿಗರನ್ನು

**97.** ಈ ಕವನದ ಮೊದಲ ಎರಡು ಸಾಲುಗಳು ಯಾವುದಕ್ಕೆ ಉದಾಹರಣೆಯಾಗಿದೆ ?

(A) ಆದಿಪ್ರಾಸ
(B) ಅಂತ್ಯಪ್ರಾಸ
(C) ಮಧ್ಯ ಪ್ರಾಸ
(D) ಅನುಪ್ರಾಸ

**98.** ಪಡೆದಿಲ್ಲ, ಬಯಸಿಲ್ಲ, ಸೋಲಿಲ್ಲ ಎಂಬೀ ಪದಗಳು ಯಾವ ಕ್ರಿಯಾರೂಪವನ್ನು ಸೂಚಿಸುತ್ತದೆ ?

(A) ಸಂಭಾವನಾರ್ಥ ಕ್ರಿಯಾರೂಪ
(B) ನಿಷೇದಾರ್ಥಕ ಕ್ರಿಯಾರೂಪ
(C) ವಿಧ್ಯರ್ಥಕ ಕ್ರಿಯಾರೂಪ
(D) ಕೃದಂತಾವ್ಯಯ ರೂಪ

**99.** 'ಕಾವ್ಯರಸವಾರಿಧಿ' ಇಲ್ಲಿರುವ ಅಲಂಕಾರ ಯಾವುದು?

(A) ರೂಪಕ ಅಲಂಕಾರ
(B) ಉಪಮ ಅಲಂಕಾರ
(C) ದೃಷ್ಟಾಂತ ಅಲಂಕಾರ
(D) ಉತ್ಪ್ರೇಕ್ಷೆ ಅಲಂಕಾರ

**100.** ಮೇಲಿನ ಕವನದಲ್ಲಿ 'ರತ್ನಾಕರ' ಪದಕ್ಕೆ ಸಂವಾದಿಯಾಗಿ ಬಳಕೆಯಾದ ಇನ್ನೊಂದು ಪದ ಯವುದು ?

(A) ಗಂಗೆ
(B) ವಾರಿಧಿ
(C) ಶ್ರುತಿ
(D) ತಾಳೆಯೋಲೆ

**III. Pedagogy**

**101.** ನಾಲ್ಕು ಬಿಗಿಯುತ್ತೇನೆ ನೋಡು, ಕುದುರೆಯನ್ನು ಗೂಟಕ್ಕೆ ಬಿಗಿದನು, ಪರಿಸ್ಥಿತಿ ಬಿಗಿಯಾಗಿದೆ– ಹೀಗೆ ಒಂದೇ ಪದ ಭಿನ್ನ ಅರ್ಥದಲ್ಲಿ ಪ್ರಯೋಗವಾಗುವ ವಾಕ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡಿದರೆ ಅವರಲ್ಲಿ ಯಾವ ಸಾಮರ್ಥ್ಯವನ್ನು ಬೆಳೆಸಬಹುದು?

(A) ಪದಸಂಪತ್ತನ್ನು ಹೆಚ್ಚಿಸಬಹುದು
(B) ವಾಕ್ಯದ ಅರ್ಥವನ್ನು ಸ್ಪುಟಗೊಳಿಸುತ್ತದೆ
(C) ಸಂವಹನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ
(D) ಸಂವಾದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ

**102.** ಪ್ರಾಥಮಿಕ ಹಾಗೂ ಪ್ರೌಢ ಪ್ರಾಥಮಿಕ ತರಗತಿಗಳ ಭಾಷಾ ಪಠ್ಯಪುಸ್ತಕದಲ್ಲಿ ಸರಳ ಹಾಗೂ ಸುಲಲಿತವಾದ ಪದ್ಯ ಗದ್ಯ ಭಾಗವನ್ನು ಪಠ್ಯವಸ್ತುವಾಗಿ ಅಳವಡಿಸುವುದರ ಉದ್ದೇಶವೇನು?

(A) ವ್ಯಾಕರಣವನ್ನು ತಿಳಿಯಲು
(B) ಪಠ್ಯ ಪುಸ್ತಕವು ಆಕರ್ಷಕವಾಗಿ ಕಾಣಲು
(C) ಆಸ್ವಾದನೆ ಮತ್ತು ಅರ್ಥಗ್ರಹಣ ಮಾಡಲು
(D) ಬೋಧನ ಸೌಲಭ್ಯಕ್ಕಾಗಿ

103. ಭಾಷಾ ತರಗತಿಯಲ್ಲಿ ಮಗುವಿನ ಮಾನಸಿಕ ಬೆಳವಣಿಗೆಗೆ, ಮಾತಿನ ನಿರರ್ಗಳತೆಗೆ, ಆಸ್ವಾದನೆಗೆ ಮತ್ತು ಸಾಹಿತ್ಯಾಭಿರುಚಿಯನ್ನು ಏಕಕಾಲದಲ್ಲಿ ಬೆಳೆಸಲು ನೀಡಬಹುದಾದ ಚಟುವಟಿಕೆ ಯಾವುದು ?
(A) ನೇಮಿತ ಕಾರ್ಯ
(B) ನಾಟಕಾಭಿನಯ
(C) ಕವಿತಾರಚನೆ
(D) ಕಾವ್ಯ ಗಾಯನ

104. ಆರನೇ ತರಗತಿಯ ಭಾಷಾಪಠ್ಯದಲ್ಲಿನ 'ವೀರಕಲ್ಲುಕ' ಪಾಠಕ್ಕೆ ಸಂಬಂಧಿಸಿ ದೃಶ್ಯ–ಶ್ರವಣ ಮಾಧ್ಯಮವನ್ನು ಬಳಸಿ ತರಗತಿ ಬೋಧನೆ ನಡೆಸಿದರೆ ವಿದ್ಯಾರ್ಥಿಗೆ ಲಭಿಸುವ ಪ್ರಯೋಜನವೇನು ?
(A) ಸಮಯ ಹರಣ ಮತ್ತು ಆಸ್ವಾದನೆ
(B) ಕ್ಷಣಿಕ ಸಂತೋಷ ಮತ್ತು ಉಪಕರಣಗಳ ಪರಿಚಯ
(C) ನಿರರ್ಗಳ ಮಾತುಗಾರಿಕೆ ಮತ್ತು ಪಾತ್ರ ಪರಿಚಯ
(D) ದೀರ್ಘಕಾಲೀನ ನೆನಪು ಮತ್ತು ಆಸ್ವಾದನೆ

105. 'ಚಿತ್ರವನ್ನು ಗಮನಿಸಿ ಕತೆ ರಚಿಸಿರಿ' – ಎಂಬ ಚಟುವಟಿಕೆಯನ್ನು ತರಗತಿಯಲ್ಲಿ ನಡೆಸಲು, ಅಧ್ಯಾಪಕರು ಅದರ ಆರಂಭದ ಒಂದು ವಾಕ್ಯವನ್ನು ಹೇಳುವರು. ಅನಂತರ ಪ್ರತಿಯೋರ್ವ ವಿದ್ಯಾರ್ಥಿಯಿಂದಲೂ ಒಂದೊಂದು ವಾಕ್ಯವನ್ನು ಹೇಳಿಸಿ ಕಥೆಯನ್ನು ಪೂರ್ಣಗೊಳಿಸುವರು. ಇದು ಈ ಕೆಳಗಿನ ಯಾವ ಬೋಧನಾ ವಿಧಾನವನ್ನು ಒಳಗೊಂಡಿದೆ ?
(A) ಆಟದ ಮೂಲಕ ಪಾಠ ವಿಧಾನ
(B) ಉಪನ್ಯಾಸ ವಿಧಾನ
(C) ಚರ್ಚಾ ವಿಧಾನ
(D) ಕಾರ್ಯಯೋಜನಾ ವಿಧಾನ

106. ಸಮಸ್ಯಾಧಾರಿತ ಮತ್ತು ಸಂಶೋಧನಾತ್ಮಕ ಕಲಿಕೆಯಲ್ಲಿ ಮಗು ತೊಡಗಿಸಿಕೊಳ್ಳಬೇಕಾದರೆ ಯಾವ ಚಟುವಟಿಕೆಯು ಪೂರಕವಾಗಿದೆ ?
(A) ಪ್ರಬಂಧ ರಚನೆ
(B) ಕವಿತಾರಚನೆ
(C) ಕಾರ್ಯಯೋಜನೆ
(D) ಕಥಾಸಂಕಲನ ತಯಾರಿ

107. ಅಧ್ಯಾಪಕರು ದೈನಂದಿನ ಪಾಠಯೋಜನೆಯನ್ನು ಸಿದ್ಧ ಪಡಿಸುವುದರ ಉದ್ದೇಶವೇನು ?
(A) ದಿನದ ಪಾಠಕ್ಕೆ ಒಂದು ನಿರ್ದಿಷ್ಟ ಗುರಿಯನ್ನು ಒದಗಿಸುವುದು
(B) ಒಂದು ನಿಶ್ಚಿತ ಸಮಯಕ್ಕೆ ಬೇಕಾದ ಪಾಠವನ್ನು ವ್ಯವಸ್ಥೆಗೊಳಿಸಲು
(C) ಮೌಲ್ಯಮಾಪನವನ್ನು ಸುಲಭಗೊಳಿಸಲು
(D) ಪರಸ್ಪರ ಮೌಲ್ಯಮಾಪನ ನಡೆಸಲು

108. ವಿದ್ಯಾರ್ಥಿಯಲ್ಲಿ ಸಂವಹನ ಸಾಮರ್ಥ್ಯವನ್ನು ಬೆಳೆಸಲು ಈ ಕೆಳಗಿನ ಯಾವ ಚಟುವಟಿಕೆಯು ಯೋಗ್ಯ ?
(A) ನೇಮಿತ ಕಾರ್ಯ ಮತ್ತು ಕಾರ್ಯಯೋಜನೆ
(B) ಕಥಾರಚನೆ ಮತ್ತು ಕವನ ರಚನೆ
(C) ಪ್ರಬಂಧ ರಚನೆ ಮತ್ತು ಪತ್ರ ಬರೆಯುವಿಕೆ
(D) ಚರ್ಚಾಕೂಟ ಮತ್ತು ಸಂವಾದ

109. ಭಾಷಾತರಗತಿಗೆ ಸಂಬಂಧಿಸಿ ವಿದ್ಯಾರ್ಥಿಗಳಲ್ಲಿ ಪದಸಂಪತ್ತನ್ನು ಹೆಚ್ಚಿಸಲು ಈ ಕೆಳಗಿನ ಯಾವ ಚಟುವಟಿಕೆಯು ಪೂರಕವಾಗುವುದು ?
(A) ಬರಹ ಬರೆಯುವುದು
(B) ಅರ್ಥ ಕೋಶಗಳ ಬಳಕೆ
(C) ಕವನ ಸಂಗ್ರಹ
(D) ಕಂಠ ಪಾಠ

110. ವಿದ್ಯಾಸಂಸ್ಥೆಗಳಲ್ಲಿ ಮೆಟ್ಟಿಲುಗಳ ಜೊತೆ ರ್‍ಯಾಂಪನ್ನು ನಿರ್ಮಿಸಲು ಕಾರಣವೇನು ?
(A) ವಿದ್ಯಾರ್ಥಿಗಳು ಆಟ ಆಡಲು
(B) ತ್ವರಿತವಾಗಿ ತರಗತಿ ತಲುಪಲು
(C) ಆಹಾರ ಪದಾರ್ಥಗಳನ್ನು ಸಾಗಿಸಲು
(D) ವಿಕಲಚೇತನ ವಿದ್ಯಾರ್ಥಿಗಳಿಗೆ ಅನುಕೂಲವಾಗಲು

## IV. Content

**111.** ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇರು ಕ

ಈ ಪದ್ಯಭಾಗವು ಯಾವ ಛಂದಸ್ಸಿನಲ್ಲಿದೆ ?

(A) ಶಾರ್ದೂಲ ವಿಕ್ರೀಡಿತ
(B) ಮತ್ತೇಭವಿಕ್ರೀಡಿತ
(C) ಮಹಾ ಸ್ರಗ್ಧರೆ
(D) ಚಂಪಕ ಮಾಲೆ

**112.** ಹೊಲಗದ್ದೆಗಳಲ್ಲಿ ಕೆಲಸ ಮಾಡುವಾಗ (ನೇಜಿ ನೆಡುವಾಗ) ಸ್ತ್ರೀಯರು ಹಾಡುವ ಹಾಡನ್ನು ಏನೆಂದು ಕರೆಯುತ್ತಾರೆ ?

(A) ಲಾಲಿಯ ಹಾಡುಗಳು
(B) ನಾಟಿಯ ಹಾಡುಗಳು
(C) ಸಂಪ್ರದಾಯದ ಹಾಡುಗಳು
(D) ಆಚರಣೆಯ ಹಾಡುಗಳು

**113.** ಹಳೆಗನ್ನಡದಲ್ಲಿ ಅಮ್ಮ ಎಂದರೆ ತಂದೆ, ಹೊಸಗನ್ನಡದಲ್ಲಿ ತಾಯಿ ಈ ಬಗೆಯ ಭಾಷಿಕ ಬದಲಾವಣೆಯನ್ನು ಏನೆಂದು ಕರೆಯುತ್ತಾರೆ ?

(A) ಅರ್ಥ ವ್ಯತ್ಯಾಸ
(B) ಸಾಮ್ಯಮೂಲ ವ್ಯತ್ಯಾಸ
(C) ಧ್ವನಿ ವ್ಯತ್ಯಾಸ
(D) ಭಾಷಿಕ ವ್ಯತ್ಯಾಸ

**114.** ಮರದಿಂದ ಹಣ್ಣು ಉದುರಿತು ಇಲ್ಲಿ 'ಮರದಿಂದ' ಎಂಬುದರಲ್ಲಿ ಕಾಣುವ ವಿಭಕ್ತಿ ಪ್ರತ್ಯಯ ಯಾವುದು?

(A) ತೃತಿಯಾ ವಿಭಕ್ತಿ
(B) ಚತುರ್ಥ ವಿಭಕ್ತಿ
(C) ದ್ವಿತೀಯಾ ವಿಭಕ್ತಿ
(D) ಪಂಚಮಿ ವಿಭಕ್ತಿ

**115.** ತಗ್ಗಿದ ಗದ್ದೆಗೆ ಮೂರು ಬೆಳೆ ಈ ಗಾದೆಮಾತಿನ ಆಶಯವೇನು ?

(A) ತಗ್ಗಿದ ಗದ್ದೆಯಲ್ಲಿ ಪೈರು ಚೆನ್ನಾಗಿ ಬೆಳೆಯುತ್ತದೆ
(B) ವಿನಯವಂತನು ಸಂಪನ್ನನಾಗುತ್ತಾನೆ
(C) ತಗ್ಗಿದ ಗದ್ದೆಯಲ್ಲಿ ಮೂರು ಬೆಳೆ ಬೆಳೆಯುತ್ತದೆ
(D) ಎತ್ತರದಲ್ಲಿ ಇರುವ ಗದ್ದೆಯಲ್ಲಿ ಬೆಳೆಯುವ ಬೆಳೆ

**116.** 'ವಂದಾನ್' – ಈ ಪದವು ಕನ್ನಡ ಭಾಷೆಯ ಯಾವ ಅವಸ್ಥೆಗೆ ಸೇರುತ್ತದೆ ?

(A) ನಡುಗನ್ನಡ
(B) ಹಳೆಗನ್ನಡ
(C) ಹೊಸಗನ್ನಡ
(D) ಪೂರ್ವದ ಹಳೆಗನ್ನಡ

**117.** 'ಸಿಪಾಯಿ' – ಇದು ಯಾವ ಭಾಷೆಯಿಂದ ಕನ್ನಡಕ್ಕೆ ಬಂದ ಪದ ?

(A) ಸಂಸ್ಕೃತ
(B) ಫಾರಸಿ
(C) ಲ್ಯಾಟಿನ್
(D) ಪ್ರಾಕೃತ

**118.** ಕನ್ನಡದ ಮೊದಲ ಶಾಸನ ಯಾವುದು ?

(A) ಆತಕೂರು ಶಾಸನ
(B) ತಳಂಗರೆ ಶಾಸನ
(C) ಹಲ್ಮಿಡಿ ಶಾಸನ
(D) ತಮ್ಮಟಕಲ್ಲು ಶಾಸನ

**119.** 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' – ಈ ಸಾಲಿರುವ ಕೃತಿಯಾವುದು ?

(A) ಪಂಪಭಾರತ
(B) ಕವಿರಾಜಮಾರ್ಗ
(C) ಗದಾಯುದ್ಧ
(D) ಶಾಂತಿ ಪುರಾಣ

**120.** ಅಭಿನವ ಪಂಪನೆಂದು ಪ್ರಸಿದ್ಧನಾದ ಕವಿ ಯಾರು ?

(A) ನಾಗಚಂದ್ರ
(B) ಪಂಪ
(C) ದುರ್ಗಸಿಂಹ
(D) ಶಾಂತಿನಾಥ

- o 0 o -

www.prepp.in

# Rough Work

www.prepp.in

Prepp
Your Personal Exams Guide

6. For answering questions, candidates are advised to follow instruction strictly given in the Question Paper and on the OMR Answer Sheet.

7. **There will be no negative marking.**

8. The candidate must return the Question Booklet and Answer Sheet (OMR Sheet) to the invigilator before leaving the examination centre. However, student must collect carbon/ duplicate copy of attempted OMR Answer Sheet from Invigilator before leaving the examination hall.

   **Don't rub, erase, cut, fold or overwrite on the OMR Answer Sheets.**


   Cutting or overwriting in any box provided for answering question will be deemed to be an incorrect answer.

## INSTRUCTIONS FOR FILLING THE OMR (ANSWER SHEET)


(a) USE ONLY DARK BLUE/BLACK BALL POINT PEN for writing and marking the ovals.

(b) To answer questions, dark only one oval ( Ⓐ Ⓑ Ⓒ Ⓓ ) with black/dark blue ink, which you consider correct, corresponding to a specific question.

(c) Mark your answer in the appropriate oval against the number corresponding to the question you are answering, e.g. correct way to mark answer 10 (C) is :



(d) The following way of marking should be avoided.



(e) If you darken more than one ovals, your answer will be treated as wrong.

(f) Do not put any stray mark anywhere on the OMR (Answer Sheet) other than marking in the chosen response.

(g) Do not fold, multiple, tear or wrinkle the OMR Answer Sheet.

(h) Don't use backside of OMR Answer Sheet for rough work.

(i) Since the sheet will be processed by a machine, write and mark the ovals in the appropriate space only.

   **For rough work, use only the pages marked as rough work in the Question Paper Booklet.**

**Signature of the Candidate** **Signature of the Invigilator**